1ನೇ **ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಸಾಗರ**

**ಸಿಸಿ ನಂಬರು** 314-2021

**ಸಿ.ಡಬ್ಲ್ಯು** -3, **ಪಿ.ಡಬ್ಲ್ಯು** -4

**ಸಾಕ್ಷಿದಾರರ ಹೆಸರು** : ಶಿವರುದ್ರಯ್ಯ ಎ.ಆರ್.
ತಂದೆಯ **ಹೆಸರು** : ರಾಜಶೇಖರಯ್ಯ .ಎಂ.
**ವಯಸ್ಸು** : 58 ವರ್ಷ
**ಉದ್ಯೋಗ** : ಪೊಲೀಸ್ ಮುಖ್ಯ ಪೇದೆ, ಸಾಗರ ಟೌನ್ ಪೊಲೀಸ್ ಠಾಣೆ,
**ವಾಸ** : ಸಾಗರ

**ಪ್ರಮಾಣೀಕರಿಸಿದ ದಿನಾಂಕ:28.07.2026.**

**<u>ಮುಖ್ಯ ವಿಚಾರಣೆ :</u>** ಸ.ಸ.ಅ. ರವರಿಂದ

1. ನಾನು 2013 ರಿಂದ 2021 ರವರೆಗೆ ಸಾಗರದ ಉಪ ಅಧೀಕ್ಷಕರ ಕಚೇರಿಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ19.09.2020 ರಂದು ನಾನು ಮತ್ತು ಚಾಸ 1 ಮತ್ತು 2 ರವರು ತ್ಯಾಗರ್ತಿ ಕ್ರಾಸ್ ಬಳಿ ಗಸ್ತು ಕರ್ತವ್ಯವನ್ನು ನಿರ್ವಹಿಸುತ್ತಿದ್ದಾಗ ಚಾಸ 2 ರವರು ತಮ್ಮ ಬೀಟ್ ವ್ಯಾಪ್ತಿಯಲ್ಲಿ ಕೋಣನಕಟ್ಟೆ ಗ್ರಾಮದ ಮಂಜಪ್ಪ ಎಂಬುವವರು ತಮ್ಮ ವಾಸದ ಮನೆಯ ಮುಂದೆ ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದಿದೆ ಎಂದು ನಮಗೆ ತಿಳಿಸಿದರು. ಚಾಸ 1 ಸದರಿ ಮಾಹಿತಿಯನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿದರು. ನಂತರ ದಾಳಿಗೆ ಹೊರಟೆವು. ಸಂಜೆ 5.30 ಗಂಟೆಯ ಸಮಯದಲ್ಲಿ ಶೆಡ್ತಿಕೆರೆ ಗ್ರಾಮದ ಬಸ್ ನಿಲ್ದಾಣದ ಬಳಿ ಕುಳಿತಿದ್ದ ಚಾಸ 4 ಮತ್ತು 5 ರವರನ್ನು ದಾಳಿಗೆ ಸಹಕರಿಸುವಂತೆ ಕೇಳಿಕೊಂಡಾಗ ಅವರು ಒಪ್ಪಿದ್ದು, ಅವರಿಗೆ ಪಂಚರ ನೋಟೀಸನ್ನು ನೀಡಿ ಅವರನ್ನು ಇಲಾಖಾ ವಾಹನದಲ್ಲಿ ಕರೆದುಕೊಂಡು ಸಂಜೆ 5.55 ಗಂಟೆಗೆ ಮಾಹಿತಿ ಬಂದ ಸ್ಥಳಕ್ಕೆ ಹೋದೆವು.

3. ಅಲ್ಲಿ ಒಬ್ಬ ವ್ಯಕ್ತಿ ಗೋಣಿಚೀಲದಲ್ಲಿ ಇಟ್ಟಿದ್ದ ವಸ್ತುವನ್ನು ಅಲ್ಲಿ ನಿಂತಿದ್ದ ಜನರಿಗೆ ನೀಡಿ ಅವರಿಂದ ಹಣವನ್ನು ಪಡೆಯುತ್ತಿದ್ದ. ನಾವು ಮತ್ತು ಸಿಬ್ಬಂದಿ ದಾಳಿ ಮಾಡಿದಾಗ ಜನರೆಲ್ಲರೂ ಓಡಿ ಹೋದರು. ಗೋಣಿಚೀಲವನ್ನು ಇಟ್ಟುಕೊಂಡಿದ್ದ ವ್ಯಕ್ತಿಯನ್ನು ನಾನು ಹಿಡಿದುಕೊಂಡೆ. ಗೋಣಿ ಚೀಲವನ್ನು ಪರಿಶೀಲಿಸಿದಾಗ 90 ಎಂ ಎಲ್ ಅಳತೆಯ 93 ಒರಿಜಿನಲ್ ಚಾಯ್ಸ್ ವಿಸ್ಕಿಯ ಪೌಚುಗಳು, 180 ಎಂ ಎಲ್ ಅಳತೆಯ ಓಲ್ಡ್ ಟವರಿನ್ ವಿಸ್ಕಿಯ 7 ಪೌಚುಗಳು, 180 ಎಂ ಎಲ್ ಅಳತೆಯ ಆಫೀಸರ್ ಚಾಯ್ಸ್ ವಿಸ್ಕಿಯ 5 ಪೌಚುಗಳು, 180 ಎಂ ಎಲ್ ಅಳತೆಯ ಬ್ಯಾಕ್ ಪೈಪರ್ ವಿಸ್ಕಿಯ 3 ಪೌಚುಗಳು, 500 ಎಂ ಎಲ್ ಅಳತೆಯ ಕಿಂಗ್ ಫಿಶರ್ ಬಿಯರ್ ನ 6 ಟಿನ್ ಗಳು ದೊರೆತವು.

ಇವುಗಳನ್ನು ಮಾರಾಟ ಮಾಡಲು ಪರವಾನಗಿ ಇದೆಯೇ ಎಂದು ಕೇಳಿದಾಗ ಆ ವ್ಯಕ್ತಿ ಇಲ್ಲ ಎಂದು ತಿಳಿಸಿದ. ಆತ ತನ್ನ ಹೆಸರು ಮಂಜಪ್ಪ ಬಿನ್ ರಾಮನಾಯ್ಕ ಎಂದು ತಿಳಿಸಿದ. ಎಲ್ಲಿಂದ ಇವುಗಳನ್ನು ಖರೀದಿಸಿ ತಂದಿರುವುದಾಗಿ ವಿಚಾರಿಸಿದಾಗ ಅವುಗಳನ್ನು ಸಾಗರದ ಎಸ್ ಎನ್ ಸರ್ಕಲ್ ನಲ್ಲಿರುವ ತಿರುಮಲ ವೈನ್ ಶಾಪ್ ನಿಂದ ಖರೀದಿಸಿ ತಂದಿರುವುದಾಗಿ ತಿಳಿಸಿದ. ದೊರೆತ ಮದ್ಯದ ಮಾಲುಗಳನ್ನು ನಮ್ಮ ವಶಕ್ಕೆ ಪಡೆದು ಪಂಚನಾಮೆಯ ಕ್ರಮವನ್ನು ಜರುಗಿಸಿ ದೊರೆತ ಎಲ್ಲಾ ಮದ್ಯದ ಮಾಲುಗಳಿಂದ ತಲಾ 1 ರಂತೆ ಮಾದರಿಗಳನ್ನು ಕಾಯ್ದಿರಿಸಿ ದೊರೆತ 350/- ರೂಗಳನ್ನು ಜಪ್ತುಪಡಿಸಿಕೊಂಡು ಸಂಜೆ 6 ರಿಂದ 7.15 ರವರೆಗೆ ಪಂಚನಾಮೆಯ ಕ್ರಮವನ್ನು ಜರುಗಿಸಲಾಗಿರುತ್ತದೆ. ನಂತರ ಆರೋಪಿ ಮತ್ತು ಜಪ್ತುಪಡಿಸಿಕೊಂಡ ಮಾಲುಗಳೊಂದಿಗೆ ಚಾಸ 1 ರವರು ಠಾಣೆಗೆ ಬಂದು ಆರೋಪಿಯ ವಿರುದ್ಧ ಸರ್ಕಾರಿ ತರ್ಫೆಯಲ್ಲಿ ದೂರನ್ನು ನೀಡಿ ಆರೋಪಿ ಮತ್ತು ಮಾಲುಗಳನ್ನು ಚಾಸ 7 ರವರ ವಶಕ್ಕೆ ನೀಡಿರುತ್ತಾರೆ.

4. ಸಾಕ್ಷಿಯು ನಿಪಿ 1 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಜಪ್ತುಪಡಿಸಿಕೊಂಡ 350/- ರೂಗಳ ನೋಟುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು 1 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಮಾದರಿಗಾಗಿ ಕಾಯ್ದಿರಿಸಿದ 5 ಪೌಚುಗಳನ್ನು ಮತ್ತು ಒಂದು ಬ್ಯಾಗನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ಈಗಾಗಲೇ ಮುದ್ದೆ ಮಾಲು 2 ಎಂದು ಗುರುತಿಸಲಾಗಿರುತ್ತದೆ. ಆ ದಿನ ನಾವು ದಸ್ತಗಿರಿ ಮಾಡಿದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. (ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲವೆಂದು ನಿವೇದಿಸಿಕೊಂಡಿರುತ್ತಾರೆ).

<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಎಂ.ಕೆ.ಎಸ್. ವಕೀಲರಿಂದ</u>

1. ಈ ದಾಳಿ ನಡೆದಿದೆ ಎಂದು ಹೇಳುತ್ತಿರುವ ದಿನ ನಾನು ಕರ್ತವ್ಯದಲ್ಲಿ ಇದ್ದ ಕುರಿತು ಕರ್ತವ್ಯ ದಿನಚರಿ ಇರುತ್ತದೆ. ಈ ದಾಳಿ ನಡೆದಿದೆ ಎಂದು ಹೇಳುತ್ತಿರುವ ದಿನ ನಾವು ಯಾವುದೇ ವಾಹನವನ್ನು ತಪಾಸಣೆ ಮಾಡಿರುವುದಿಲ್ಲ. ನಾವು ಶೆಡ್ತಿಕೆರೆ ಗ್ರಾಮಕ್ಕೆ ಹೋದಾಗ ಸಮಯ ಸಂಜೆ 5.55 ಗಂಟೆಯಾಗಿತ್ತು. ನಾವು ಶೆಡ್ತಿಕೆರೆ ಗ್ರಾಮಕ್ಕೆ ಇಲಾಖಾ ವಾಹನದಲ್ಲಿಯೇ ಹೋಗಿರುತ್ತೇವೆ. ಸದರಿ ವಾಹನವನ್ನು ಸಂದೀಪ್ ಎಂಬ ಚಾಲಕ ಚಲಾಯಿಸುತ್ತಿದ್ದರು. ನಾವು ಒಟ್ಟು 3 ಜನ ಹೋಗಿರುತ್ತೇವೆ. ಇಲಾಖಾ ವಾಹನದ ಚಾಲಕ ದಾಳಿಗೆ ಬರಲಿಲ್ಲ. ಪಂಚರು ಸಿಕ್ಕಾಗ ಸಮಯ ಸಂಜೆ 5.55 ಗಂಟೆಯಾಗಿತ್ತು. ಪಂಚರ ಸಿಕ್ಕ ಸಮಯದ ನಮೂದನೆ ಪಂಚನಾಮೆಯಲ್ಲಿ ಇಲ್ಲ ಎಂದರೆ ಸರಿ.

2. ಚಾಸ 1 ರವರು ನೀಡಿರುವ ದೂರಿನಲ್ಲಿರುವ ಘಟನಾ ಸ್ಥಳ ಹಾಗೂ ಪಂಚನಾಮೆಯಲ್ಲಿ ಬರೆದಿರುವ ಘಟನಾ ಸ್ಥಳಕ್ಕೂ ಎರಡಕ್ಕೂ ವ್ಯತ್ಯಾಸ ಇದೆ ಎಂದರೆ ಸರಿ. ಮದ್ಯವನ್ನು ಖರೀದಿಸುತ್ತಿದ್ದರು ಎಂದು ಹೇಳುತ್ತಿರುವ ವ್ಯಕ್ತಿಗಳನ್ನು ನಾವು ವಿಚಾರಣೆ ಮಾಡಿರುವುದಿಲ್ಲ. ನಾವು ದಾಳಿ ಮಾಡಿದ ಸ್ಥಳದ ಅಕ್ಕಪಕ್ಕ ಮನೆಗಳು ಇರಲಿಲ್ಲ. ನಾವು ದಾಳಿ ಮಾಡಿದಾಗ ಸಮಯ ಸಂಜೆ 5.55 ರಿಂದ 6.00 ಗಂಟೆಯಾಗಿತ್ತು. ದಾಳಿಯ ಕಾಲಕ್ಕೆ ನಾವು ಪೋಟೋ ತೆಗೆದಿರುವುದಿಲ್ಲ. ದೊರೆತ ಮದ್ಯದ ಮಾಲುಗಳಿಗೆ ಕ್ರಮ ಸಂಖ್ಯೆ ನೀಡಿರುವುದಿಲ್ಲ, ಅದರ ಬ್ಯಾಚ್ ನಂಬರ್ ಅನ್ನು ಪಂಚನಾಮೆಯಲ್ಲಿ ಬರೆದಿರುವುದಿಲ್ಲ.

3. ಪಂಚನಾಮೆಯ ಕಾಲಕ್ಕೆ ಯಾರ್ಯಾರು ಯಾವ್ಯಾವ ಕ್ರಮವನ್ನು ಅನುಸರಿಸಿದರು ಪಂಚನಾಮೆಯಲ್ಲಿ ಬರೆದಿರುವುದಿಲ್ಲ. ಚಾಸ 4 ವರದಮೂಲದವರು, ಚಾಸ 5 ಶೆಡ್ತಿಕೆರೆಯವರು. ಚಾಸ 1 ರವರು ನನ್ನ ಮೇಲಾಧಿಕಾರಿ ಎಂದರೆ ಸರಿ. ಚಾಸ 1 ರವರು ಅಂಕಿ ಸಂಖ್ಯೆಗೋಸ್ಕರ ಸಲ್ಲಿಸಿರುವ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗೂ ಘಟನಾ ಸ್ಥಳಕ್ಕೂ ಮುದ್ದೆ ಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**

**ಓದಿ ಹೇಳಿ ಕೇಳಿ ಸರಿ ಇದೆ**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಸಾಗರ.